

## ಆನ್‌ಲೈನ್ ಅನಿವಾರ್ಯ

ಕನ್ನಡ ಹೆಚ್ಚು ಹೆಚ್ಚು ಪ್ರಸ್ತುತವಾಗಲು ಆನ್‌ಲೈನ್ ಮಾಧ್ಯಮ ತುಂಬಾ ಮುಖ್ಯ ಮತ್ತು ಅನಿವಾರ್ಯ. ಆದರೆ ನಾವಿನ್ನೂ ಅದನ್ನು ಸಮರ್ಪಕವಾಗಿ ಬಳಕೆ ಮಾಡಿಕೊಳ್ಳುವ ಹಂತ ತಲುಪಿಲ್ಲ. ಉದಾಹರಣೆಗೆ, ಯಾವುದೋ ಸ್ಥಳದಲ್ಲಿ ಒಂದೊಳ್ಳೆಯ ವಿಚಾರಗೋಷ್ಠಿ ನಡೆದರೆ ಅಲ್ಲಿ ಬೆರಳೆಣಿಕೆಯ ಜನರು ಮಾತ್ರ ಸೇರುತ್ತಾರೆ. ಅದು, ಎಲ್ಲರೂ ಒಂದೆಡೆ ಸೇರಲು ಆಗದ ಕಾರಣ ಉಂಟಾಗುವ ಸಮಸ್ಯೆ. ಆದರೆ ಆನ್‌ಲೈನ್ ಮೂಲಕ 'ಜಾಲ ಗೋಷ್ಠಿ' (ವೆಬಿನಾಳ್) ನಡೆಸಿದರೆ, ಎಲ್ಲೋ ಇದ್ದವರೂ ಭಾಗವಹಿಸಬಹುದು. ಅಲ್ಲಿಂದಲೇ ಪ್ರಶ್ನೆ ಕೇಳಬಹುದು, ಅಭಿಪ್ರಾಯ ಹಂಚಿಕೊಳ್ಳಬಹುದು. ಭಾಗವಹಿಸುವಿಕೆ ಹೆಚ್ಚಿದಂತೆ ಕನ್ನಡದ ಬಳಕೆಯೂ ಹೆಚ್ಚುತ್ತದೆ.

**-ನರಸಿಂಹಮೂರ್ತಿ,**
**ಕನ್ನಡ ಗಣಕ ಪರಿಷತ್ ಕಾರ್ಯದರ್ಶಿ**



ಋತುಮಾನದ ಆ್ಯಪ್ ಬಿಡುಗಡೆ ಆಗುತ್ತದೆ. ಒಂದು ಪುಸ್ತಕದ ಬಗ್ಗೆ ಇರುವ ಎಲ್ಲ ಮಾಹಿತಿಯೂ ಒಂದೇ ಕಡೆ ಸಿಗುವ ವೇದಿಕೆ ಇದು. ಇದರ ಜೊತೆಗೆ ಪುಸ್ತಕಗಳನ್ನು ಪ್ರಕಟಿಸುವ ಯೋಜನೆಗಳಿಗೂ ಋತುಮಾನ ಕಾವು ಕೊಡುತ್ತಿದೆ.

### ಕನ್ನಡ ಗಣಕ ಪರಿಷತ್ ಬಲ

ತಂತ್ರಜ್ಞಾನ ಲೋಕದಲ್ಲಿ ಕನ್ನಡದ ಕುಕಿಲು ಮೂಡುತ್ತಿರುವ ಹಂತದಲ್ಲಿ ಒತ್ತಾಸೆಯಾಗಿ ನಿಲ್ಲುವ ಉದ್ದೇಶದಿಂದ 1997ರರಲ್ಲಿ ಆರಂಭಗೊಂಡ ಲಾಭರಹಿತ ಸ್ವಯಂಸೇವಾ ಸಂಸ್ಥೆ ಕನ್ನಡ ಗಣಕ ಪರಿಷತ್ತು. ಇಂದು ಕನ್ನಡ ಟೈಪಿಂಗ್‌ನಲ್ಲಿ ವ್ಯಾಪಕವಾಗಿ ಬಳಕೆಯಾಗುತ್ತಿರುವ 'ನುಡಿ ತಂತ್ರಾಂಶ' ಈ ಸಂಸ್ಥೆಯದ್ದೇ ಕೊಡುಗೆ. ಕನ್ನಡದ ಗಣಕೀಕರಣದ ಕೆಲಸದವನ್ನು ವಿವಿಧ ಯೋಜನೆಗಳ ಮೂಲಕ ಕಾರ್ಯರೂಪಕ್ಕೆ ತರುತ್ತಿದೆ. ಈ ಕುರಿತು ಸರ್ಕಾರದ ಗಮನಸೆಳೆಯುವ ಕೆಲಸವನ್ನೂ ಮಾಡುತ್ತಿದೆ.

ಆಡುವ ಕನ್ನಡ ಮಾತುಗಳನ್ನು ಗ್ರಹಿಸಿಕೊಂಡು ಪರದೆಯ ಮೇಲೆ ಅಕ್ಷರ ಮೂಡಿಸುವ 'ವಾಗಕ್ಷರ' ಎಂಬ ತಂತ್ರಜ್ಞಾನದ ಅಭಿವೃದ್ಧಿಪಡಿಸುವ ಕೆಲಸದಲ್ಲಿ 'ಕನ್ನಡ ಗಣಕ ಪರಿಷತ್' ತೊಡಗಿದೆ. ಇದು ಶೇ. 98–99 ನಿಖರ ಫಲಿತಾಂಶ ನೀಡುತ್ತದೆ. ಚಿಕ್ಕಪುಟ್ಟ ತಪ್ಪುಗಳಿದ್ದರೆ ಅದನ್ನೂ ಮತ್ತೊಮ್ಮೆ ಉಚ್ಚರಿಸುವ ಮೂಲಕ ಸರಿಪಡಿಸಲು ಸಾಧ್ಯವಿದೆ. ಕಾಲರ್ ಮೈಕ್ ಬಳಸಿಕೊಂಡರೆ ಸುತ್ತಲಿನ ಶಬ್ದಗಳನ್ನು ತಡೆಯಬಹುದು. ಪುಸ್ತಕ ಪ್ರಕಾಶನ, ಡಿಟಿಪಿ ಮಾಡುವವರು, ಭಾಷಾಂತರಕಾರರು, ನ್ಯಾಯಾಲಯಗಳಲ್ಲಿ ಇದೊಂದು ಉಪಯುಕ್ತ ತಂತ್ರಜ್ಞಾನವಾಗಿ ಒದಗಿಬರುವುದರಲ್ಲಿ ಸಂದೇಹವಿಲ್ಲ.

'ಪ್ರಾಯೋಗಿಕವಾಗಿ 'ವಾಗಕ್ಷರ' ತಂತ್ರಾಂಶವನ್ನು ಈಗಾಗಲೇ ಕೆಲವು ಕಡೆಗಳಲ್ಲಿ ಅಳವಡಿಸಿದ್ದಾರೆ. ಕೆಲವು ತಿಂಗಳುಗಳಲ್ಲಿ ಇದು ಮಾರುಕಟ್ಟೆಗೆ ಬರುತ್ತದೆ. ಇದು ಡೇಟಾ ಸೆಂಟರ್‌ಗಳ ಮೂಲಕ ನಿರ್ವಹಣೆ ಆಗುತ್ತದೆ. ಆ ಕೆಲಸವನ್ನು 'ಜ್ಞಾನಿ' ಎಂಬ ಸಂಸ್ಥೆ ಮಾಡುತ್ತದೆ. ಹೀಗಾಗಿ ಇದು ಉಚಿತ ತಂತ್ರಾಂಶವಾಗಿರುವುದಿಲ್ಲ. ವರ್ಷಕ್ಕೆ ಅಂದಾಜು ಹದಿನೈದು ಸಾವಿರ ರೂಪಾಯಿ ನೀಡಿ ಲೈಸನ್ಸ್ ಪಡೆಯಬೇಕಾಗುತ್ತದೆ. ಕನ್ನಡ, ಇಂಗ್ಲಿಷ್, ಹಿಂದಿ, ತಮಿಳು, ತೆಲುಗು, ಗುಜರಾತಿ ಭಾಷೆಯಲ್ಲಿಯೂ ಈ ತಂತ್ರಜ್ಞಾನವನ್ನು ಅಭಿವೃದ್ಧಿಪಡಿಸಲಾಗಿದೆ. ಗೂಗಲ್‌ನವರು ಪೂರೈಸುವ ತಂತ್ರಜ್ಞಾನಕ್ಕೆ ಹೋಲಿಸಿದರೆ ಇದು ತೀರಾ ಕಡಿಮೆ ವೆಚ್ಚದಾಯಕ ಮತ್ತು ಹೆಚ್ಚು ನಿಖರ ಫಲಿತಾಂಶ ಕೊಡುವ ಕಾಯಕ' ಎನ್ನುತ್ತಾರೆ 'ಕಗಪ'ದ ಕಾರ್ಯದರ್ಶಿ




